# ರಕ್ತಾಕ್ಷಿ–ಹ್ಯಾಮ್ಲೆಟ್ ನಾಟಕಗಳಲ್ಲಿನ ವಸ್ತು ನಿರ್ವಹಣೆ: ತೌಲನಿಕ ವಿವೇಚನೆ

**ವಿಜಯಲಕ್ಷ್ಮಿ ಡಿ.**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ರಾಮಯ್ಯ ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಮತ್ತೀಕೆರೆ, ಬೆಂಗಳೂರು–560054.

**ಡಾ. ಸುಮಾ ಆರ್.**
ಪ್ರಾಧ್ಯಾಪಕರು
ಕನ್ನಡ ವಿಭಾಗ
ಎಸ್.ಜೆ.ಬಿ.ಸಿ.ಎಂ.ಎಸ್.
ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ
ಕೆಂಗೇರಿ, ಬೆಂಗಳೂರು–560060.

**Article Link: https://aksharasurya.com/2023/06/vijayalakshmi-d-suma-r/**

**ಪೀಠಿಕೆ:**

ಸಾಹಿತ್ಯಾಸಕ್ತರು ಅನೇಕ ಸಾಹಿತ್ಯ ಕೃತಿಗಳನ್ನು ಓದುವುದು ಸಹಜ ಪ್ರವೃತ್ತಿ. ಹಾಗೆ ಓದುವಾಗ ಆಗೊಮ್ಮೆ ಈಗೊಮ್ಮೆ ಒಂದು ಕೃತಿಯನ್ನು ಇನ್ನೊಂದು ಕೃತಿಯೊಡನೆ ಹೋಲಿಸಿ ನೋಡುವ ಕುತೂಹಲ ಮೂಡುವುದು. ಉದಾ: ಪಂಪ–ರನ್ನ, ಕುಮಾರವ್ಯಾಸ–ಚಾಮರಸ, ಬೇಂದ್ರೆ–ಕುವೆಂಪು, ಗೋಕಾಕ–ಅಡಿಗ ಇವರ ಕೃತಿಗಳ ಬಂಧ–ವ್ಯಾಪ್ತಿ, ಅರ್ಥಗೌರವ, ಸಂಪ್ರದಾಯ, ನಾವೀನ್ಯ ಇಂತಹ ಕೆಲವು ತತ್ವಗಳನ್ನು ಆಧರಿಸಿ ಹೋಲಿಕೆ ಮಾಡಬಹುದು. ಇಂಥ ಪ್ರಯತ್ನವನ್ನೇ ತೌಲನಿಕ ಅಭ್ಯಾಸವೆಂದು ಹೇಳುವುದು.

ತೌಲನಿಕ ಅಧ್ಯಯನ ಒಂದು ವಿಶಿಷ್ಟ ಶಾಸ್ತ್ರವಾಗಿ ಬೆಳೆದಿದ್ದು ಇತ್ತೀಚೆಗೆ. ಇದನ್ನು ಪ್ರತ್ಯೇಕ ಅಧ್ಯಯನವನ್ನಾಗಿ ರೂಪಿಸಿದ್ದು 1861ರಲ್ಲಿ. ತೌಲನಿಕ ಅಧ್ಯಯನಕ್ಕೆ ಕಾವ್ಯ ಮಿಮಾಂಸೆ, ಸಾಹಿತ್ಯ ವಿಮರ್ಶೆ ಸೇರುತ್ತವೆ. ತೌಲನಿಕ ಅಧ್ಯಯನ ಬೇರೆ ಬೇರೆ ಭಾಷೆಗಳ ಗ್ರಂಥಗಳ ತೌಲನಿಕ ಅಭ್ಯಾಸ. ತೌಲನಿಕ ಅಧ್ಯಯನ ಕೃತಿಗಳ

ಹೋಲಿಕೆಯಷ್ಟೇ ಅಲ್ಲದೆ, ಬೇರೆ ಬೇರೆ ಭಾಷೆಗಳನ್ನಾಡುವವರ ನಡುವಣ ಸಾಹಿತ್ಯ ಬಾಂಧವ್ಯಗಳೂ ಅಧ್ಯಯನಕ್ಕೆ ಸೇರುತ್ತವೆ. ಅಂದರೆ ಅನುವಾದ ಆಧಾರಿತ ಕೃತಿ, ಸ್ವೀಕರಣ ಇವೂ ಸಹ ಅಧ್ಯಯನಕ್ಕೆ ಒಳಪಡುತ್ತವೆ. ಎರಡು ಕೃತಿಗಳಲ್ಲಿರುವ ಸಾಮಗ್ರಿ, ಮೂಲದಲ್ಲಿ ಆ ಸಾಮಗ್ರಿ ಬಳಕೆಯಾಗುವ ರೀತಿ, ಕೃತಿಗಳಲ್ಲಿರುವ ಭಿನ್ನತೆಯ ಸ್ವರೂಪ, ಶೈಲಿ, ವಸ್ತು, ಕಾವ್ಯಸೃಷ್ಟಿಯ ಸಂದರ್ಭ ಕಾಲ ಎಲ್ಲವೂ ತೌಲನಿಕ ಅಧ್ಯಯನದ ಶಿಸ್ತಿಗೆ ಒಳಪಟ್ಟಿರುತ್ತವೆ.

ಹೀಗೆ ಎರಡು ಕೃತಿಗಳನ್ನು ತೌಲನಿಕ ಅಧ್ಯಯನಕ್ಕೆ ಒಳಪಡಿಸುವಾಗ ದೃಷ್ಟಿ ವೈಶಾಲ್ಯ ಹೊಂದಿರಬೇಕಾಗಿರುತ್ತದೆ. ಕೃತಿಗಳನ್ನು ಸವಿಯುವಾಗ ಅವುಗಳ ಹಿನ್ನಲೆ, ಸಂದರ್ಭ, ಪರಿಸರ, ಬೆಳವಣಿಗೆ, ಸ್ವೀಕಾರ ಇವುಗಳ ಅಭ್ಯಾಸವೂ ಅಗತ್ಯವಾಗಿರುತ್ತದೆ. ತೌಲನಿಕ ಅಧ್ಯಯನದಲ್ಲಿ ವಿಸ್ತಾರವಾಗಿ ನೋಡುವ ಗುಣ ಹಾಗೂ ತೀವ್ರತೆ ಎರಡೂ ಬೇಕಾಗುತ್ತದೆ. ಈ ರೀತಿಯ ಸಾಹಿತ್ಯಾಭ್ಯಾಸವು ನವ್ಯ ವಿಮರ್ಶೆಯ ಸಂಕುಚಿತ ವ್ಯಾಪ್ತಿಯನ್ನು ವಿಸ್ತಾರಗೊಳಿಸುತ್ತದೆ. ಪೂರ್ವದಲ್ಲಿ ವಿಮರ್ಶೆಯ ವೈಪರೀತ್ಯವನ್ನು ಸುಧಾರಿಸಲು ಪ್ರಯತ್ನ ಮಾಡಬಹುದು. ತೌಲನಿಕ ಅಭ್ಯಾಸವು ಒಂದು ವಾದವಲ್ಲ ಅದು ಒಂದು ಚಟುವಟಿಕೆ. ಇಲ್ಲಿ ಎಲ್ಲಾ ಸಾಹಿತ್ಯರೂಪಗಳಿಗೆ ಸ್ಥಾನವಿದೆ. ಎಲ್ಲಾ ನಾಡು, ಎಲ್ಲಾ ಭಾಷೆಗಳು ಒಳಗೊಳ್ಳುವ, ಅಭ್ಯಾಸಿಸುವ ಕಾರ್ಯಕ್ಷೇತ್ರವಿದು. ಇದರಿಂದ ಕುಶಲತೆಗೆ ದಾರಿ ಮಾರ್ಗವಾಗುತ್ತದೆ.

ಸಮಾನ ಅಥವಾ ವಿಭಿನ್ನ ಅನುಭವ ಮತ್ತು ಅಭಿವ್ಯಕ್ತಿಗಳ ವೈಚಿತ್ರವನ್ನು ತೂಗಿ ನೋಡುವ ಚಿಂತನೆಯೊಂದಿಗೆ. ಕನ್ನಡದ ಎರಡು ನಾಟಕಗಳನ್ನು ತೌಲನಿಕವಾಗಿ ಅಭ್ಯಾಸ ಮಾಡುವ ಇಚ್ಛೆಯಿಂದಾಗಿ ರಾಷ್ಟ್ರಕವಿ ಕುವೆಂಪು ಅವರು ಬರೆದಿರುವ "ರಕ್ತಾಕ್ಷಿ" ಹಾಗೂ ಪರ್ವತವಾಣಿಯವರು ಅನುವಾದಿಸಿರುವ ಇಂಗ್ಲೀಷ್‌ನ ಪ್ರಖ್ಯಾತ ನಾಟಕಕಾರ ಷೇಕ್ಸ್‌ಪಿಯರ್‌ನ "ಹ್ಯಾಮ್ಲೆಟ್" ನಾಟಕವನ್ನು ತುಲನೆಗೆ ಒಳಪಡಿಸುತ್ತ ಅದರಲ್ಲೂ ವಸ್ತು ನಿರ್ವಹಣೆಯಲ್ಲಿ ಎರಡೂ ನಾಟಕಗಳಲ್ಲಿ ಕಂಡುಬರುವ ಸಮಾನ ಅನುಭವ, ವಿಶಿಷ್ಟವಾದ ಅಭಿವ್ಯಕ್ತಿಗಳನ್ನು ತೌಲನಿಕವಾಗಿ ವಿಶ್ಲೇಷಿಸುವ ಪ್ರಯತ್ನ ಮಾಡಹೊರಟಿದ್ದೇನೆ.

**ಸಾರಾಂಶ:**

ಕಾಲ, ದೇಶ, ಸಂಸ್ಕೃತಿ ಯಾವುದೇ ಇರಲಿ ವ್ಯಕ್ತಿಯ ಅನುಭವಕ್ಕೆ ಬರುವ ಕೆಲವು ಸಾರ್ವಕಾಲಿಕ ಭಾವನುಭವಗಳಿವೆ. ಪ್ರೀತಿ, ದ್ವೇಷ, ಸ್ವಾರ್ಥ, ತ್ಯಾಗ,

ಅನುಕಂಪ, ದೈರ್ಯ, ಅಭಿಮಾನ, ಅವಮಾನ ಇವೇ ಮೊದಲಾದ ಸಮಾನ ಅಂಶಗಳನ್ನು ಹೊಂದಿರುತ್ತವೆ. ಇಂತಹ ಸಮಾನ ಅಥವಾ ವಿಭಿನ್ನ ಅನುಭವ ಮತ್ತು ಅಭಿವ್ಯಕ್ತಿಗಳ ವೈಚಿತ್ರವನ್ನು ನೋಡುವ ಪ್ರಯತ್ನವನ್ನು ತೌಲನಿಕವಾಗಿ ಅಧ್ಯಯನ ಮಾಡುವ ಅಗತ್ಯವಿದೆ. ಒಂದು ಕಲಾ ಕೃತಿಗೆ ನಿರ್ದಿಷ್ಟ 'ವಸ್ತು' ಮೂಲ ಆಕರ, ಸಾಹಿತ್ಯದ ಯಾವ ಪ್ರಕಾರದ ಕೃತಿಗಾಗಲಿ ವಸ್ತು ಇದ್ದೇ ಇರುತ್ತದೆ. ವಸ್ತು ಸಾಮಾನ್ಯವಾದರೂ ಅದರ ಅಭಿವ್ಯಕ್ತಿಯ ವಿಶಿಷ್ಟ ರೀತಿ ಕೃತಿಯೊಂದರ ಯಶಸ್ಸಿಗೆ ಕಾರಣವಾಗುತ್ತದೆ.

ಹ್ಯಾಮ್ಲೆಟ್ ನಾಟಕದ ಕಥಾವಸ್ತು ಡೆನ್ಮಾರ್ಕಿನ ದೊರೆ, ಅವನ ರಾಣಿ ಗರ್ಟ್ರೂಡ್ ಇವರ ಮಗ ಹ್ಯಾಮ್ಲೆಟ್, ದೊರೆಯ ತಮ್ಮ ಕ್ಲಾಡಿಯನ್ ಇವರ ಸುತ್ತ ಹೆಣೆದಿರುವ ಕಥೆ. ಕ್ಲಾಡಿಯನ್ ಮತ್ತು ಗರ್ಟ್ರೂಡ್ ನಡುವಿನ ಅಕ್ರಮ ಸಂಬಂಧ, ಮೋಸದಿಂದ ಆದ ರಾಜನ ಹತ್ಯೆ, ತಂದೆಯ ಸಾವಿಗೆ ಸೇಡು ತೀರಿಸಿಕೊಳ್ಳಲು ಕಾರ್ಯತತ್ಪರನಾದ ಹ್ಯಾಮ್ಲೆಟ್ ಕಥೆಯಿದು. ನಾಟಕ ದುರಂತದ ಮುಖಾಂತರ ಅಂತ್ಯ ಕಾಣುತ್ತದೆ.

ರಕ್ತಾಕ್ಷಿಯ ಕಥಾವಸ್ತು ಸಂಸ್ಥಾನವೊಂದರ ದೊರೆಯನ್ನು ಕೊಂದು ರಾಜ್ಯವನ್ನು ಕಬಳಿಸಿ ಸಂಬಂಧವನ್ನು ಇರಿಸಿಕೊಂಡವನನ್ನು ಕೊಲ್ಲುವ ನಿರ್ಧಾರ ಮಾಡಿದ ಯುವರಾಜ ಬಸವಯ್ಯ, ಕೊನೆಗೆ ತಾನೆ ಕೊಲೆಗೊಳಗಾದರೂ ದೊರೆಯ ಮಗ ಹೇಗೆ ಸೇಡು ತೀರಿಸಿಕೊಳ್ಳುತ್ತಾನೆ ಎನ್ನುವುದೇ ಈ ನಾಟಕದ ಮುಖ್ಯ ಕಥಾವಸ್ತು. ರಕ್ತಾಕ್ಷಿ ಮತ್ತು ಹ್ಯಾಮ್ಲೆಟ್ ನಾಟಕಗಳನ್ನು ಪರಸ್ಪರ ಹೋಲಿಸಿ ನೋಡಿದಾಗ ಸಾಮ್ಯ, ವ್ಯತ್ಯಾಸಗಳನ್ನು ಹೊಂದಿರುವುದನ್ನು ನೋಡಬಹುದು.

ರಕ್ತಾಕ್ಷಿಯು ಹ್ಯಾಮ್ಲೆಟ್ ನಾಟಕದ ಪ್ರೇರಣೆಯಿಂದಲೇ ರಚಿತವಾಗಿರುವುದರಲ್ಲಿ ಸಂದೇಹವಿಲ್ಲ. ಆದರೆ ಅದು ಹ್ಯಾಮ್ಲೆಟ್ ಅನುವಾದವಲ್ಲ. ಎರಡೂ ನಾಟಕಗಳಲ್ಲಿ ಕಂಡುಬರುವ ಘಟನೆಗಳು, ಪಾತ್ರಗಳು, ನಡೆನುಡಿ, ಸಾಮ್ಯತೆ ಮತ್ತು ವ್ಯತ್ಯಾಸ ಎರಡೂ ಅಂಶಗಳನ್ನ ಹೊಂದಿವೆ.

ರಕ್ತಾಕ್ಷಿ ಮತ್ತು ಹ್ಯಾಮ್ಲೆಟ್ ನಾಟಕಗಳ ವಸ್ತುವಿನಲ್ಲಿ ಕಾಣುವ ಸಾಮ್ಯತೆಯ ತೌಲನಿಕ ವಿವೇಚನೆ:

ಎರಡೂ ನಾಟಕಗಳಲ್ಲಿ ಥಟ್ಟನೆ ನೆನಪಿಗೆ ಬಂದು ನಿಲ್ಲುವ ವಸ್ತು 'ಅನೈತಿಕ ಸಂಬಂಧ'. ಹ್ಯಾಮ್ಲೆಟ್ ನಾಟಕದಲ್ಲಿ ರಾಣಿ ಗರ್ಟ್ರೂಡ್ ಮತ್ತು ಅವಳ ಮೈದುನ

ಕ್ಲಾಡಿಯನ್ ನಡುವಿನ ಅನೈತಿಕ ಸಂಬಂಧದ ಕಾರಣಕ್ಕಾಗಿ, ಹಾಗೂ ಅದರ ಸುಗಮದ ಹಾದಿಗಾಗಿ ಗಂಡನನ್ನು ಕಾಲಕೂಟ ವಿಷದಿಂದ ಕೊಲೆಮಾಡಿಸುತ್ತಾರೆ. ರಕ್ತಾಕ್ಷಿಯಲ್ಲಿಯೂ ಇದೇ ರೀತಿಯ ಅನೈತಿಕ ಸಂಬಂಧ ಇರುವುದು ಬಸವಯ್ಯನ ತಾಯಿ ಚೆಲುವಾಂಬೆ ಮತ್ತು ನಿಂಬಯ್ಯರಿಗೆ ಇರುವ ಸಂಬಂಧ. ಸೇನಾಪತಿಯೊಡನೆ ಇರುವ ಪ್ರೇಮ ಸಂಬಂಧವನ್ನು ಮುಂದುವರಿಸಲು ಆತನೊಡನೆ ಸೇರಿ ಬಸವನಾಯಕನನ್ನು ಕೊಲೆ ಮಾಡಿಸುತ್ತಾಳೆ. ಎರಡೂ ನಾಟಕಗಳಲ್ಲಿ ಕೊಲೆಯನ್ನು ಸಹಜ ಸಾವು ಎಂದು ಪ್ರಚಾರ ಮಾಡುವ ಪ್ರಯತ್ನ ಮಾಡುತ್ತಾರೆ. ಅದು ಅಸಹಜ ಸಾವು ಎಂಬ ಸಂಶಯ ಹ್ಯಾಮ್ಲೆಟ್ ಮತ್ತು ಬಸವಯ್ಯರ ಮನಸ್ಸಿನಲ್ಲಿ ಬರುವುದನ್ನು ಕಾಣಬಹುದು.

ಎರಡೂ ನಾಟಕಗಳಲ್ಲಿ ಬರುವ ಮತ್ತೊಂದು ಸಮಾನ ಅಂಶ 'ಭೂತದ ಸನ್ನಿವೇಶ'. ಕೊಲೆಯ ರಹಸ್ಯ ಬಯಲಾಗುವುದು ಎರಡೂ ನಾಟಕಗಳಲ್ಲಿ ಭೂತದ ಮೂಲಕ. ಕೊಲೆಯಾದ ಡೆನ್ಮಾರ್ಕಿನ ರಾಜ ಮತ್ತು ಬಿದನೂರಿನ ರಾಜ ತಮ್ಮ ಕೊಲೆಯ ರಹಸ್ಯವನ್ನು ಭೂತದ ರೂಪದಲ್ಲಿ ಬಂದು ಹೇಳುತ್ತಾರೆ. ಇದನ್ನು ಕೇಳಿದ ಹ್ಯಾಮ್ಲೆಟ್ ಮತ್ತು ಬಸವಯ್ಯ ಇಬ್ಬರೂ ತಂದೆಯ ಸಾವಿಗೆ ಕಾರಣರಾದವರ ಮೇಲೆ ಸೇಡು ತೀರಿಸಿಕೊಳ್ಳುವ ನಿರ್ಧಾರ ಮಾಡುತ್ತಾರೆ.

ಬಸವಯ್ಯ ಭೂತ ರೂಪಿ ತಂದೆಯೊಡನೆ ಆಡುವಾಗಿನ ಮಾತುಗಳು ಹ್ಯಾಮ್ಲೆಟ್ ನಾಟಕದ ಅನುವಾದವೇ ಆಗಿವೆ.

ರಕ್ತಾಕ್ಷಿಯಲ್ಲಿ,

> ಶಿವಾ ಶಿವಾ ಕಾಪಾಡು!
> ದೆವ್ವನೋ?, ದೇವತೆಯೊ ಯಾರಾದರಾಗಿರು!
> ಶುಭವು ನಿನ್ನುದ್ದೇಶವೋ............. (ಪುಟ– 35)

ಹ್ಯಾಮ್ಲೆಟ್ ನಾಟಕದಲ್ಲಿ

> ದೇವ ದೇವತೆಗಳ ರಕ್ಷೆ ನಮ್ಮೆಲ್ಲರಿಗೂ ಇರಲಿ, ನೀನು ದೈವ ಕೃಪೆಗೆ ಪಾತ್ರನಾದ
> ಪುಣ್ಯಾತ್ಮನೇ ಇರು, ನರಕಕ್ಕೆ ದೂಡಲ್ಪಟ್ಟ ದುಷ್ಟ ಪಾಪಿ ಪಿಶಾಚಿಯೇ ಇರು (ಪುಟ–14)

ಜೊತೆಗೆ ಎರಡೂ ನಾಟಕಗಳು ದುರಂತ ಅಂತ್ಯವನ್ನು ಕಾಣುತ್ತದೆ. ಎರಡೂ ನಾಟಕಗಳಲ್ಲಿ ಕಥಾನಾಯಕರು ಸಾವಿಗೀಡಾಗುತ್ತಾರೆ. ಈ ಮೇಲಿನ ಅಂಶಗಳೆಲ್ಲವೂ ಸಾಮ್ಯತೆಯನ್ನು ಎತ್ತಿ ತೋರಿಸುತ್ತಿವೆ.

**'ವಸ್ತು' ನಿರ್ವಹಣೆಯಲ್ಲಿ ಕಾಣುವ ವ್ಯತ್ಯಾಸಗಳ ತೌಲನಿಕ ವಿವೇವನೆ:**

ಹೋಲಿಕೆ ಮತ್ತು ವ್ಯತ್ಯಾಸಗಳನ್ನು ತೂಗಿ ನೋಡಿದರೆ ಹೋಲಿಕೆಗಳಿಗಿಂತಲೂ ವ್ಯತ್ಯಾಸಗಳ ಸಾಲೇ ಹೆಚ್ಚು. ಕುವೆಂಪು ಅವರ ರಕ್ತಾಕ್ಷಿಯು ಹ್ಯಾಮ್ಲೆಟ್ ನಾಟಕದಿಂದ ಪ್ರೇರಣೆ ಪಡೆದಿದ್ದರೂ ಕೆಲವು ಅಂಶಗಳಲ್ಲಿ ಸ್ವತಂತ್ರ ನಡೆಯನ್ನು ಕಾಣಬಹುದು.

ಎರಡೂ ನಾಟಕಗಳ ಆರಂಭದ ಒಂದೆರಡು ಅಂಶಗಳ ಕೆಲ ದೃಶ್ಯಗಳು ಸಾಮ್ಯತೆ ಹೊಂದಿದ್ದರೂ ನಂತರ ನಡೆಯುವ ಕ್ರಿಯೆ, ಪರಿಣಾಮ ಎಲ್ಲದರಲ್ಲೂ ವ್ಯತ್ಯಾಸವನ್ನು ನೋಡಬಹುದು. ಕೆಲವು ದೃಶ್ಯಗಳ ಪರಿಕಲ್ಪನೆಯಂತೂ ಬೇರೆಯದೇ ರೀತಿಯಲ್ಲಿ ಒಡಮೂಡಿಬಂದಿದೆ.

- ಹ್ಯಾಮ್ಲೆಟ್ ನಾಟಕದಲ್ಲಿ ಗರ್ಟ್ರೂಡ್ ಸ್ವಂತ ತಾಯಿ, ರಕ್ತಾಕ್ಷಿಯಲ್ಲಿ ಬಸವಯ್ಯನ ತಾಯಿ ಮಲತಾಯಿ.
- ಹ್ಯಾಮ್ಲೆಟ್ ನಾಟಕದಲ್ಲಿ ಅನೈತಿಕ ಸಂಬಂಧ ರಕ್ತಸಂಬಂಧದಲ್ಲಿಯೇ ಅಂದರೆ ಮೈದನ ಜೊತೆಗೆ, ರಕ್ತಾಕ್ಷಿಯಲ್ಲಿ ಚೆಲುವಾಂಬೆ ಒಲಿದಿರುವುದು ಸೇನಾಪತಿ ನಿಂಬಯ್ಯನಿಗೆ.
- ಸೇಡನ್ನು ತೀರಿಸಿಕೊಳ್ಳುವುದು, ಅದಕ್ಕಾಗಿ ಪ್ರಯತ್ನಿಸುವುದನ್ನು ಗಮನಿಸಿದಾಗ ತಂದೆಯನ್ನು ಮೋಸದಿಂದ ಕೊಂದ ತಾಯಿ ಮತ್ತು ಅವಳ ಪ್ರಿಯಕರನನ್ನು ಹ್ಯಾಮ್ಲೆಟ್ ಕೊನೆಗಾಣಿಸುತ್ತಾನೆ. ಆದರೆ ರಕ್ತಾಕ್ಷಿಯಲ್ಲಿ ತಂದೆಯ ಸಾವಿನ ಸೇಡನ್ನು ಬಸವಯ್ಯ ತೀರಿಸಿಕೊಳ್ಳಲಾಗದೆ ಅವನ ಪ್ರೇಯಸಿ ರುದ್ರಾಂಬೆ ತೀರಿಸಿಕೊಳ್ಳುತ್ತಾಳೆ. ಬಸವಯ್ಯನು ಸೇಡಿನ ಭಾವದ ತೀವ್ರತೆ ಇಲ್ಲದ ಪಾತ್ರವಾಗಿದ್ದಾನೆ. ತನ್ನ ಸೇಡನ್ನು ತೀರಿಸಿಕೊಳ್ಳುವ ಜವಾಬ್ದಾರಿಯನ್ನು ಗೆಳೆಯ ಹೊನ್ನಯ್ಯನಿಗೆ ಹೊರಿಸುವುದು ಎಷ್ಟು ಉಚಿತ? ಬಸವಯ್ಯನ ದೇಹ, ಮನಸ್ಸು ಆಲೋಚನೆಯೇ ಆದ ರುದ್ರಾಂಬೆ ಸೇಡು ತೀರಿಸಿಕೊಳ್ಳುತ್ತಾಳೆ. ಹ್ಯಾಮ್ಲೆಟ್ಟಿನ ಪ್ರೇಯಸಿ ಒಫೀಲಿಯಾಳ ಪಾತ್ರ ಏನೇನು ಇರದಿರುವುದು ಕಾಣಬಹುದು.
- ಕೊಲೆಯ ಸಂಚು ಭೂತದ ಮೂಲಕ ತಿಳಿಯಿತಾದರೂ ಕೊಲೆಗಾಗಿ ಬಳಸಿದ ತಂತ್ರಗಳು ಎರಡೂ ನಾಟಕಗಳಲ್ಲಿ ಭಿನ್ನ. ಹ್ಯಾಮ್ಲೆಟ್

ನಾಟಕದಲ್ಲಿ ದೊರೆ ಸುಖನಿದ್ರೆ ಮಾಡುವಾಗ ಹಬೆನಾನ್ ವಿಷವನ್ನು ಕಿವಿಗೆ ಸುರಿದು ಸಾವು ಸಂಭವಿಸುತ್ತದೆ. ರಕ್ತಾಕ್ಷಿಯಲ್ಲಿ ಬಸವಯ್ಯನಾಯಕನಿಗೆ ಮದ್ದಿನಲ್ಲಿ ವಿಷ ಬೆರೆಸಿ ಸಾಯಿಸುತ್ತಾರೆ.

**ಉಪಸಂಹಾರ**

ದೇಶ, ಸಂಸ್ಕೃತಿ, ಸ್ವಭಾವ ಸಂಬಂಧಗಳಿಗೆ ಅನುಗುಣವಾಗಿ ನಾಟಕದಲ್ಲಿ ಕೆಲವೊಮ್ಮೆ ಬದಲಾವಣೆ ಗಮನಿಸಬಹುದು. ಐತಿಹಾಸಿಕ ವ್ಯಕ್ತಿ ವಿಷಯಗಳ ನೈಜ ಘಟನೆಯನ್ನು ಆಧರಿಸಿ ರಚಿತವಾದ ಹೈದರನ ಪಾತ್ರ ರಕ್ತಾಕ್ಷಿಯಲ್ಲಿ ಸ್ಥಾನ ಪಡೆದಿದೆ. ಈ ರೀತಿಯ ಪಾತ್ರ ಹ್ಯಾಮ್ಲೆಟ್‌ನಲ್ಲಿ ಎಲ್ಲೂ ಕಾಣುವುದಿಲ್ಲ.

ಮತ್ತೆ ಕೆಲವು ಸಣ್ಣ ಪುಟ್ಟ ಬದಲಾವಣೆಗಳಿಂದ ರಕ್ತಾಕ್ಷಿ ನಾಟಕ ಹ್ಯಾಮ್ಲೆಟ್ ನಾಟಕಕ್ಕಿಂತ ತೀರ ವಿಭಿನ್ನವಾಗಿ ನಿಲ್ಲುತ್ತದೆ. ಒಫೀಲಿಯಾ ಮತ್ತು ರುದ್ರಾಂಬೆಯ ಗುಣ, ಸ್ವರೂಪ, ವರ್ತನೆ, ಬಸವಯ್ಯನು ಕೊಲೆಯಾದ ರೀತಿ, ನಾಟಕದ ಅಂತ್ಯ ಮೊದಲಾದವು ಹ್ಯಾಮ್ಲೆಟ್ ನಾಟಕಕ್ಕೆ ವಿರುದ್ಧವಾಗಿದೆ. ಬಸವಯ್ಯ ನಾಟಕದ ನಡುವೆಯೇ ಮೃತನಾದರೆ ಹ್ಯಾಮ್ಲೆಟ್ ನಾಟಕದ ಅಂತ್ಯದಲ್ಲಿ ಸಾವನಪ್ಪುತ್ತಾನೆ.

ಹೀಗೆ ಹ್ಯಾಮ್ಲೆಟ್ ಮತ್ತು ರಕ್ತಾಕ್ಷಿಯ ನಾಟಕಗಳಲ್ಲಿ ಕೆಲವು ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಗಮನಿಸಿ. ಇವೆರಡರ ವಸ್ತು ನಿರ್ವಹಣೆಯನ್ನು ತೌಲನಿಕ ವಿವೇಚನೆಗೆ ಒಳಪಡಿಸಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಸಿ. ಎನ್. ರಾಮಚಂದ್ರನ್: ತೌಲನಿಕ ಸಾಹಿತ್ಯ ಮತ್ತು ಇತರ ಲೇಖನಗಳು, ಪ್ರಸಾರಂಗ, ಮೈಸೂರು ವಿಶ್ವವಿದ್ಯಾನಿಲಯ, 1977.
2. ಡಾ. ಎಚ್. ತಿಪ್ಪೇರುದ್ರಸ್ವಾಮಿ: ತೌಲನಿಕ ಕಾವ್ಯ ಮೀಮಾಂಸೆ, ಪ್ರ: ಡಿ.ವಿ.ಕೆ. ಮೂರ್ತಿ, ಮೈಸೂರು, 1985.
3. ಎಲ್. ಎಸ್. ಶೇಷಗಿರಿರಾವ್: ವಿಲಿಯಮ್ ಷೇಕ್ಸಪಿಯರ್, ಪ್ರಸಾರಂಗ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, 1961.
4. ಕೆ. ಮರುಳ ಸಿದ್ದಪ್ಪ; ಆಧುನಿಕ ಕನ್ನಡ ನಾಟಕಗಳು, ಲಿಪಿ ಪ್ರಕಾಶನ, ಬೆಂಗಳೂರು, 1993.
5. ನರಹಳ್ಳಿ ಬಾಲ ಸುಬ್ರಮಣ್ಯ: ಕುವೆಂಪು ನಾಟಕಗಳ ಅಧ್ಯಯನ, ಅಂಕಿತ ಪ್ರಕಾಶನ, ಬೆಂಗಳೂರು.
6. ತು.ಶು. ಶಾಮರಾಯರು: ಕನ್ನಡ ನಾಟಕಗಳು, ಮೈಸೂರು.